ಸರ್ಕಾರಿ ವೈದ್ಯರು ಖಾಸಗಿಯಾಗಿ ಪ್ರಾಕ್ಟೀಸ್ ಮಾಡುತ್ತಿರುವುದು

2031 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸರ್ಕಾರಿ ವೈದ್ಯರು ಖಾಸಗಿಯಾಗಿ ಪ್ರಾಕ್ಟೀಸ್ ಮಾಡುತ್ತಿರುವುದನ್ನು ತಡೆಗಟ್ಟುವ ಉದ್ದೇಶ ಅಥವಾ ಮುಂದುವರೆಸುವ ಬಗ್ಗೆ 3 ಜನ ಸದಸ್ಯರ ಸಮಿತಿಯನ್ನು ಸರ್ಕಾರವು ರಚಿಸಿದೆಯೆ?*

ಆ) *ಹಾಗಿದ್ದರೆ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆಯೆ?*

ಇ) *ಹಾಗಿದ್ದರೆ ಸರ್ಕಾರವು ಆ ವರದಿಯ ಮೇಲೆ ಯಾವ ಕ್ರಮ ತೆಗೆದುಕೊಂಡಿದೆ?*

ಈ) *ಸರ್ಕಾರಿ ವೈದ್ಯರು ಖಾಸಗಿಯಾಗಿ ಪ್ರಾಕ್ಟೀಸ್ ಮಾಡುತ್ತಿರುವುದನ್ನು ತಡೆಗಟ್ಟಲು ಉದ್ದೇಶಿಸಿದೆಯೇ?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಅಧ್ಯಕ್ಷರು : ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ವರದಿಗಳನ್ನು ಒಪ್ಪಿಸುವುದು

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಮೂರನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

(ಗ್ರಾನೈಟ್ ಕಲ್ಲಿನ ಲೂಟಿ ತಪ್ಪಲಿ, ನಿಸರ್ಗ ಸಂಪತ್ತನ್ನು ಉಳಿಸಿ ಎಂದು ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ವಾಟಾಳ್ ನಾಗರಾಜ್ ಮತ್ತಿತರ ವಿರೋಧ ಪಕ್ಷದ ಮಾನ್ಯ ಸದಸ್ಯರು ಘೋಷಣೆಗಳನ್ನು ಕೂಗಿದರು.)

ಅಧ್ಯಕ್ಷರು : ಸಭೆ ಈಗ ಮುಕ್ತಾಯಗೊಂಡು ಹದಿನೈದು ನಿಮಿಷದ ನಂತರ ಪುನಃ ಸಮಾವೇಶಗೊಳ್ಳುತ್ತದೆ.

ಗ್ರಾನೈಟ್ ಕಲ್ಲುಗಳ ವ್ಯವಹಾರದ ರಾಷ್ಟ್ರೀಕರಣದ ಬಗ್ಗೆ ಮುಖ್ಯಮಂತ್ರಿಗಳಿಂದ ಉತ್ತರ

ಸದನವು ಮತ್ತೆ 12-02ಕ್ಕೆ ಸಮಾವೇಶಗೊಂಡಿತು.

ಮಾನ್ಯ ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ ಅವರು) ತಮ್ಮ ಪೀಠದಲ್ಲಿ ಉಪಸ್ಥಿತರಾಗಿದ್ದರು)

+ ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಬೇರೆ ಬೇರೆ ಪಕ್ಷದ ನಾಯಕರು ಹಾಗೂ ಸದಸ್ಯ ಮಿತ್ರರುಗಳು ಗ್ರಾನೈಟ್ ಕ್ವಾರಿ ವಿಚಾರದಲ್ಲಿ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಇದು ಇವತ್ತು ಪ್ರಶ್ನೋತ್ತರ

ಕಾಲದಲ್ಲಿ ಬಂದಿರತಕ್ಕಂಥ ವಿಚಾರ. ಈ ಮಧ್ಯೆ ಖಾಸಗಿ ನಿರ್ಣಯವೂ ಕೂಡ ಸದನದ ಮುಂದೆ ಇದೆ. ಚರ್ಚೆಯೂ ಕೂಡ ಸಾಕಷ್ಟು ಆಗಿದ್ದು ಅದರ ಬಗ್ಗೆ ಸಾಕಷ್ಟು ಕಾಲ ಕೂಡ ವಿನಿಯೋಗವಾಗಿದೆ. ಅದರಲ್ಲಿ ಹಲವಾರು ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಏತಕ್ಕೆಂದರೆ, ಈ ಕ್ವಾರಿಯಿಂಗ್ ವಿಚಾರದಲ್ಲಿ ಚರ್ಚೆ ನಡೆಯುತ್ತಿರತಕ್ಕಂಥ ಉದ್ದೇಶವೇನೆಂದರೆ ನೈಸರ್ಗಿಕ ಸಂಪತ್ತು ಹಾಳಾಗಬಾರದು, ಅದನ್ನು ಉಳಿಸಬೇಕು ಎನ್ನುವುದು ಒಂದು ವಿಚಾರವಾದರೆ ನೈಸರ್ಗಿಕ ಸಂಪತ್ತನ್ನು ಸದುಪಯೋಗ ಪಡಿಸಬೇಕು. ಅದರಿಂದ ವರಮಾನವನ್ನು ಪಡೆಯಬೇಕು ಎನ್ನುವುದು ಮತ್ತೊಂದು ಅಭಿಪ್ರಾಯವಾಗಿದೆ. ನಾನು ಈಗ ಆ ವಿಚಾರಗಳ ವಿವರಕ್ಕೆ ಹೋಗದೆ ಇಷ್ಟು ಮಾತ್ರ ಹೇಳಬಲ್ಲೆ. ಇವತ್ತು ಆತಂಕ ಮತ್ತೊಂದು ಏನು ಇದೆ, ಇದು ಎಲ್ಲರ ಮನಸ್ಸಿನಲ್ಲಿಯೂ ಇರತಕ್ಕಂಥ ವಿಚಾರ. ಬರೀ ಆಕಡೆ ಇರುವ ಮಿತ್ರರು ಮಾತನಾಡಿದ್ದಾರೆ ಎನ್ನುವ ದೃಷ್ಟಿಯಿಂದ ನಾನು ಮಾತನಾಡುತ್ತಿಲ್ಲ. ನಾವೂ ಕೂಡ ಆ ಕಡೆ ಕುಳಿತಿದ್ದಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ಅದರಲ್ಲಿ ದ್ವಂದ್ವ ಅಭಿಪ್ರಾಯ ಬರತಕ್ಕಂಥ ವಿಚಾರ ಹೌದು. ಜೊತೆಗೆ ಇದು ಏನು ನಡೆಯುತ್ತಿದೆ. ಇದು ಕಾನೂನು ಬದ್ಧವಾಗಿಯೋ, ಕಾನೂನು ಬಿಟ್ಟೋ ಎಂಬ ವಿಚಾರದ ಬಗ್ಗೆ ಪರ-ವಿರೋಧ ಅಭಿಪ್ರಾಯ ಇರುವುದು ಇವತ್ತಲ್ಲ, ಇದು ಸುಮಾರು 15-20 ವರ್ಷಗಳಿಂದ ಅವ್ಯಾಹತವಾಗಿ ನಡೆದುಕೊಂಡು ಬಂದಿರತಕ್ಕಂಥ ವಿಚಾರ. ಇದರ ಬಗ್ಗೆ ಆತಂಕ ಅವರಿಗೆ ಇದ್ದಹಾಗೆ ಸರ್ಕಾರಕ್ಕೂ ಕೂಡ ಇದೆ. ನಾವು ರಾಜ್ಯದ ಬೊಕ್ಕಸಕ್ಕೆ ವರಮಾನ ಬರಲಿ ಎನ್ನುವ ದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಆದರೆ ತಮ್ಮ ಅಭಿಪ್ರಾಯದಲ್ಲಿ ಅದು ಸಾಲದು ಎಂತಲೋ, ಸಾಕಾಗದು ಎಂತಲೋ ಅಥವಾ ಇನ್ನೂ ಕಾನೂನು ಪ್ರಬಲವಾಗಬೇಕೆಂತಲೋ ಆ ಒಂದು ಅಭಿಪ್ರಾಯ ಬರತಕ್ಕಂಥ ಸಂದರ್ಭವೂ ಕೂಡ ಇದೆ. ನನಗೆ ಗೊತ್ತಿದೆ. ಇವತ್ತು ತಾವು ಯಾರ ಕೂಡ, ಈಗಿರತಕ್ಕಂಥ ಸರ್ಕಾರದವರು ಲೂಟಿ ಮಾಡಿಬಿಟ್ಟಿದ್ದಾರೆ, ಮತ್ತೊಂದು ಮಾಡಿದ್ದಾರೆ ಎನ್ನತಕ್ಕಂಥ ವಿಚಾರವೇನೂ ಹೇಳಲಿಲ್ಲ. ಇವತ್ತು ಕಾನೂನು ಏನಿದೆ, ಅದು ಸರಿಯಿಲ್ಲವೆಂತಲೋ ಅಥವಾ ನೈಸರ್ಗಿಕ ಸಂಪತ್ತು ಏನಿದೆ ಅದನ್ನು ನಾವು ಹಾಗೆಯೇ ಉಳಿಸಿಕೊಳ್ಳಬೇಕೆಂತಲೋ ಹೀಗೆ ಅನೇಕ ವಿಚಾರಗಳಲ್ಲಿ ಅಭಿಪ್ರಾಯಗಳು ಸಹಜವಾಗಿ ಬರತಕ್ಕಂಥ ಸಂದರ್ಭವಿರುತ್ತದೆ. ಈ ದೃಷ್ಟಿಯಿಂದ ಇದರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲತಕ್ಕಂಥ ಅವಶ್ಯಕತೆಯೂ ಇದೆ ಎಂದು ಸರ್ಕಾರ ಒಪ್ಪುತ್ತದೆ. ನಾನು ತಮ್ಮ ಅಭಿಪ್ರಾಯದಲ್ಲಿ ಅದು ಇಲ್ಲ ಅಥವಾ ಇಲ್ಲ ಇಲ್ಲ ನಾವು ಮಾಡಿದ್ದೇ ಸರಿ ಎಂದು ಹೇಳಿದರೆ ಹಿಂದೆ ಏನೇನು ತಪ್ಪುಗಳು ಎಷ್ಟೆಷ್ಟು ವರ್ಷಗಳ ತನಕ ಆಗಿದೆ, ಇವತ್ತು ತಪ್ಪಾಗಿದ್ದರೆ ಅದು ಸರಿ ಎಂತಲೋ ಅಥವಾ ನಮ್ಮ ಕಾಲದಲ್ಲಿ ಒಂದು ವೇಳೆ ತಪ್ಪು ಆಗಿದ್ದರೆ ಅದು ಸರಿ ಅಂತಲೋ ಅಭಿಪ್ರಾಯವನ್ನು ನಾನು ಇಟ್ಟಹಾಗೆ ಆಗುತ್ತದೆ. ಆದುದರಿಂದ ನಾನು ಆ ಒಂದು ಅಭಿಪ್ರಾಯವನ್ನು ಸ್ಪಷ್ಟವಾಗಿ ಇಡುತ್ತಿಲ್ಲ, ಆ ಉದ್ದೇಶ ನನ್ನದಲ್ಲ. ಇದರ ಬಗ್ಗೆ ಬೆಳಕು ಚೆಲ್ಲಬೇಕೆಂದು ಅಷ್ಟೇ ಆಸ್ಥೆ, ಅಭಿಪ್ರಾಯ ನಾವು ಇಟ್ಟುಕೊಂಡಿದ್ದೇವೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸದನದ ಗಮನಕ್ಕೆ, ಮಾನ್ಯ ವಿರೋಧ ಪಕ್ಷದ ನಾಯಕರ, ಮತ್ತಿತರ ಮಿತ್ರರ ಗಮನಕ್ಕೆ ತರುತ್ತಿದ್ದೇನೆ. ಇದರ ಬಗ್ಗೆ ಇದುವರೆಗೆ ಖಾಸಗಿ ನಿರ್ಣಯದ ಮುಖಾಂತರ ಅಥವಾ ಪ್ರಶ್ನೋತ್ತರ ಸಂದರ್ಭದಲ್ಲಿ ಏನು ಚರ್ಚೆ ನಡೆದಿದೆ. ಅದರ ಜೊತೆಗೆ ಇನ್ನೂ ಕೂಡ ಬೆಳಕು ಚೆಲ್ಲತಕ್ಕ ವಿಚಾರದಲ್ಲಿ ಮಾನ್ಯ ಸದಸ್ಯರು ಈ ಕಡೆಯಿಂದ ಮಾತನಾಡತಕ್ಕವರಿದ್ದಾರೆ ಮತ್ತು ಆ ಕಡೆಯಿಂದ ಮಾತನಾಡತಕ್ಕವರು ಇರಬಹುದು. ಪ್ರಶ್ನೋತ್ತರ ಕಾಲದಲ್ಲಿ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಅದು ಬಹಳ ಸೀಮಿತವಾದ ಕಾಲ ಮತ್ತು ಆ ಒಂದು ವ್ಯವಸ್ಥೆಯನ್ನು ಹೊಂದಿರತ್ಕ ನಿಯಮಾವಳಿಗಳು ನಮ್ಮ ಹತ್ತಿರ ಇದೆ. ಆದುದರಿಂದ ಚರ್ಚೆಯೇ ಆಗಬೇಕೆಂದು

ಇದ್ದರೆ ಖಾಸಗಿ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸತಕ್ಕ ಸದವಕಾಶ ಇನ್ನೂ ಕೂಡ ಆ ಕಡೆ ಮತ್ತು ಇ ಕಡೆ-ಎರಡೂ ಕಡೆಯ ಮಾನ್ಯ ಸದಸ್ಯರಿಗೆ ಇರಬೇಕಾಗುತ್ತದೆ. ನಂತರ ಸರ್ಕಾರದವರು ನಾವು ಉತ್ತರ ಕೊಡಬೇಕಾಗುತ್ತದೆ. ರಾಷ್ಟ್ರೀಕರಣದಿಂದ ಹಿಡಿದು ನಮಗೆ ಬರತಕ್ಕ ವರಮಾನದವರೆಗೆ ಏನೇನು ಮಾಡಬೇಕೆಂಬ ವಿಚಾರಗಳೆಲ್ಲ ನಮ್ಮ ಮುಂದೆ ಇವೆ. ಸರ್ಕಾರದ ನೀತಿಯ ಪ್ರಶ್ನೆ ಮುಖ್ಯವಾಗಿ ಇದರಲ್ಲಿ ಅಡಗಿದೆ ಎಂದು ನಾನು ಭಾವಿಸಿದ್ದೇನೆ. ಆದುದರಿಂದ ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ನಾನು ವಿಚಾರ ಮಾಡಬೇಕಾಗಿದೆ. ಇದಕ್ಕೆ ಸದನದ ಸಮಿತಿಯನ್ನು ಮಾಡಬೇಕೆಂಬ ಒತ್ತಡವನ್ನಿಟ್ಟು ಮಾನ್ಯ ಸದಸ್ಯರು ಈಗ ಸದನದ ಬಾವಿಗೆ ಬಂದಿದ್ದಾರೆ. ಈ ವಿಚಾರದ ಬಗ್ಗೆ ಇವತ್ತಲ್ಲ ಬಹಳ ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಆದುದರಿಂದ, ಇದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿ, ಮಾನ್ಯ ಅಧ್ಯಕ್ಷರಿಗೆ ಮತ್ತು ಸದನಕ್ಕೆ ಏನು ಹೇಳಬೇಕೆಂಬ ತೀರ್ಮಾನಕ್ಕೆ ಬರಬೇಕಾದರೆ ಸರ್ಕಾರಕ್ಕೆ ಕಾಲಾವಕಾಶ ಬೇಕಾಗುತ್ತದೆ. ಇದನ್ನು ತಾವು ಮನಗಾಡುತ್ತೀರಿ ಎಂದು ನಾನು ಭಾವಿಸಿದ್ದೇನೆ. ಈಗ ಬಾವಿ ಒಳಗಡೆ ಇರುವವರು ಹೆಚ್ಚಾಗಿ ಹಿಂದೆ ಸರ್ಕಾರವನ್ನು ನಡೆಸಿರುವವರು ಇದ್ದೀರಿ. ಅಂದಮೇಲೆ ಮಾನ್ಯ ಸಭಾಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಸರ್ಕಾರ ಉತ್ತರ ಕೊಡಬೇಕೆಂಬ ಸಂದರ್ಭ ಬೇಕೆಂದರೆ ಪರಾಪರಗಳನ್ನು ವಿಚಾರ ಮಾಡಿ ಉತ್ತರಗಳನ್ನು ಕೊಡಬೇಕಾಗುತ್ತದೆ. ಅದಕ್ಕಾಗಿ ಕಾಲಾವಕಾಶವನ್ನು ಮಾತ್ರ ಕೇಳುತ್ತಿದ್ದೇವೆಯೇ ಹೊರತು ಬೇರೆ ಏನೂ ಅಲ್ಲ.

ಎರಡನೆಯದಾಗಿ, ಇವತ್ತು ತಾವು ಬಾವಿಯಲ್ಲಿ ಏನಿದ್ದೀರಿ ಹಾಗೇ ಮುಂದು ವರಿಯುತ್ತೀರಾ ಹೇಗೆ? ಏಕೆ ನಗುತ್ತಿದ್ದೀರಿ? ನಾನು ತಾವು ಭಾವಿಯಲ್ಲಿ ಬಿದ್ದಿದ್ದೀರಿ ಎನ್ನಲಿಲ್ಲ. ಸದನದ ಬಾವಿಯಲ್ಲಿ ಇದ್ದೀರಿ ಅಂದೆ ಬಾವಿಯಲ್ಲಿ ಬಿದ್ದಿದ್ದೀರಿ ಎಂದು ಹೇಳಿದೆನೆ? ನೀವು ಬಾವಿಯಲ್ಲಿ ಬಿದ್ದಿದ್ದೀರಿ ಅಂದರೆ ನಾವು ಹಿಂದೆ ಬಿದ್ದಿದ್ದೆವು ಎಂದು ಅರ್ಥವಾಗುತ್ತದೆ. ಈ ಸಂಧರ್ಬದಲ್ಲಿ ಬಾವಿಯಲ್ಲಿ ಇದ್ದವರನ್ನು ಬಿದ್ದಿದ್ದೀರಿ ಎಂದರೆ ಮುಳುಗಿದ್ದೀರಾ ಇಲ್ಲವೇ ಎಂಬ ಪ್ರಶ್ನೆ ಬರುತ್ತದೆ. ನಿಮ್ಮನ್ನು ಮುಳುಗುವುದಕ್ಕೆ ಬಿಡಬಾರದೆಂಬುದೇ ಸರ್ಕಾರದ ಆಸೆ. ಬಾವಿಯಲ್ಲಿ ಬಿದ್ದವರನ್ನು ಮುಳುಗುವುದಕ್ಕೆ ನಾವು ಬಿಡುವುದಿಲ್ಲ. ಬಿದ್ದವರನ್ನು ಎತ್ತತಕ್ಕ ಕರ್ಥವ್ಯ ಸರ್ಕಾರದ್ದು. ಈ ಸದನದ ಕಾರ್ಯಕಲಾಪ ನಡೆಯುವುದಕ್ಕೆ ಎಲ್ಲರೂ ಸೇರಿ ಮಾನ್ಯ ಅಧ್ಯಕ್ಷರಿಗೆ ಅನುವು ಮಾಡಿಕೊಡೋಣ. ಈ ಮೊದಲು ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಏನು ನಡೆಯುತು ಎಂಬ ವಿವರಗಳಿಗೆ ಹೋಗುವುದಿಲ್ಲ. ಅದು ತಮಗೆ ಗೊತ್ತಿದೆ. ನಾವು ಇಲ್ಲಿ ಮಾತನಾಡಬೇಕಾದರೆ ಸಂಸದೀಯ ವ್ಯವಹಾರಗಳ ಚೌಕಟ್ಟಿನಲ್ಲಿ ಮಾತನಾಡಬೇಕಾಗುತ್ತದೆ. ಈಗ ಸದನ ನಡೆಯುವುದಕ್ಕೆ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅನುವುಮಾಡಿಕೊಡತಕ್ಕದ್ದು ಜವಾಬ್ದಾರಿ ನಮ್ಮದು, ನಿಮ್ಮದು ಎಲ್ಲರದ್ದೂ ಇದೆ. ಅದಕ್ಕಾಗಿ ಸರ್ಕಾರದ ಪರವಾಗಿ ಮಾನ್ಯ ಅಧ್ಯಕ್ಷರು ಅನುಮತಿಯನ್ನು ಕೇಳುತ್ತಿದ್ದೇನೆ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತಿತರ ಎಲ್ಲ ಮಾನ್ಯ ಮಿತ್ರರ ಸಹಕಾರವನ್ನು ಕೇಳುತ್ತಿದ್ದೇನೆ. ಸರ್ಕಾರದವರು ವಿಚಾರ ಮಾಡಿ ಏನು ಮಾಡಬೇಕೆಂದು ಹೇಳುತ್ತೇನೆ. ಸದನದ ಸಮಿತಿಯನ್ನು ಮಾಡಬೇಕೆಂಬ ವಿಚಾರವನ್ನು ತಾವು ಇಟ್ಟಿದ್ದೀರಿ. ಅದಕ್ಕೆ ಏನು ಮಾಡಬೇಕೆಂದು ವಿಚಾರ ಮಾಡಿ ಮಾನ್ಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸರ್ಕಾರದ ಪರವಾಗಿ ನಾವು ಹೇಳಿಕೆ ಕೊಡುತ್ತೇವೆ. ಅದನ್ನು ಮಾಡಬೇಕೆಂದರೆ ನಮಗೆ ಕಾಲಾವಕಾಶ ಬೇಕಾಗುತ್ತದೆ. ಪಕ್ಕಕ್ಕೆ ಎಂದು ನಾನು ಹೇಳಿದ್ದೇನೆ. ಈಗ ಆ ವಿವರಗಳಿಗೆ ಹೋಗಬಾರದು. ಅದಕ್ಕಾಗಿ ಹೋಗುತ್ತಿಲ್ಲ. ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಸುತ್ತೇನೆ. ದಯಮಾಡಿ ನಿಂತಿರತಕ್ಕ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.•

(ವೆಲ್‌ನಲ್ಲಿ ನಿಂತಿದ್ದ ವಿರೋಧ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಂಡರು)

ಶ್ರೀ ಎಸ್. ಬಂಗಾರಪ್ಪ : ಆದರೆ ಅಲ್ಲಿ ಅಲ್ಲ, ತಮ್ಮ ತಮ್ಮ ಸ್ವಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು ಎನ್ನುವುದೇ ನಮ್ಮ ಆಸೆ. ಮಾನ್ಯ ವಿರೋಧ ಪಕ್ಷದ ನಾಯಕರು, ಶ್ರೀ ವಾಟಾಳ್ ನಾಗರಾಜ್ ಅವರು ಮತ್ತು ಬೇರೆ ಬೇರೆ ಪಕ್ಷದ ನಾಯಕರು ಆದಿಯಾಗಿ ಎಲ್ಲಾ ಮಾನ್ಯ ಸದಸ್ಯರು ದಯಮಾಡಿ ತಮ್ಮ ತಮ್ಮ ಸ್ಥಳಗಳಿಗೆ ಮರಳಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಬೇಕೆಂದು ಗೌರವಯುತವಾಗಿ ತಮ್ಮ ಮುಖಾಂತರ ಮನವಿ ಮಾಡುತ್ತೇನೆ. ದಯಮಾಡಿ ಮಾನ್ಯ ಅಧ್ಯಕ್ಷರಿಗೆ ಈ ಸಂದರ್ಭದಲ್ಲಿ ಸಂಪೂರ್ಣ ಸಹಕಾರ ತಾವು ಕೊಡಬೇಕು. ತಾವು ಹೇಳಿರತಕ್ಕ ಮಾತನ್ನು ನಾವು ಇಲ್ಲಿ ವಿರೋಧ ಮಾಡುವುದಾಗಲೀ, ಅಲ್ಲಗಳೆಯುವುದಾಗಲೀ ಏನು ಎಂದು ಹೇಳಿಲ್ಲ. ನಾವು ಇದನ್ನು ಪರಿಶೀಲಿಸುತ್ತೇವೆ. ಏನು ಮಾಡಬೇಕು ಎನ್ನತಕ್ಕ ವಿಚಾರ ಅಥವಾ ಇದಕ್ಕಿಂತ ನಿಮ್ಮ ಮನಸ್ಸಿಗೆ ಒಳ್ಳೆಯ ಸಂತೋಷವಾಗುವ ವಿಚಾರ ಮತ್ತೊಂದೇನಾದರೂ ಸಲಹೆ ಸರ್ಕಾರದ ಮತಿಯಿಂದ ಬಂದರೂ ಬರಬಹುದು ಯಾರಿಗೆ ಗೊತ್ತು ಗುರುಪಾದಪ್ಪನವರೆ? ಅದಕ್ಕಾಗಿಯೇ ನಾನು ಹೇಳುವುದು ಸರ್ಕಾರಕ್ಕೆ ಆ ಒಂದು ಕಾಲಾವಕಾಶ....

(ಬಾಯಿಯಿಂದ ಮಾನ್ಯ ಸದಸ್ಯರಾದ ಶ್ರೀ ಜೀವರಾಜ ಆಳ್ವ ಅವರು ಮಾತನಾಡಿದರು)

ಶ್ರೀ ಎಸ್. ಬಂಗಾರಪ್ಪ : ಇಲ್ಲ, ಇಲ್ಲ, ಆಯಾಮದ ಪ್ರಶ್ನೆ ಇಲ್ಲವೇ ಇಲ್ಲ, ಬೇರೆ ರೂಪದ ಪ್ರಶ್ನೆ ಇಲ್ಲವೇ ಇಲ್ಲ. ಬೇರೆ ವಿಚಾರ ಇದಕ್ಕಿಂತ ಒಳ್ಳೆಯದು ಬಂದುಬಿಟ್ಟರೆ, ಆಳ್ವ ಅವರು ಬಹಳ ಚೆನ್ನಾಗಿದೆ ಎಂದು ಒಪ್ಪಿಬಿಟ್ಟರೆ ಬಹಳ ಒಳ್ಳೆಯದು. ಅದಕ್ಕಾಗಿ ನಾನು ಹೇಳತಕ್ಕದ್ದು ಏನೆಂದರೆ ಮಾನ್ಯ ಅಧ್ಯಕ್ಷರಿಗೆ ಈಗ ನಾವು ಎಲ್ಲರೂ ಸೇರಿ ಸಹಕಾರ ಕೊಡುವುದರ ಮುಖಾಂತರ ಅನುವು ಮಾಡಿಕೊಡೋಣ. ಮಾನ್ಯ ವಿರೋಧಪಕ್ಷದ ನಾಯಕರು ಮಾನ್ಯ ಯಡಿಯೂರಪ್ಪನವರು ಮಾನ್ಯ ವಾಟಾಳ್ ನಾಗರಾಜ್‌ರವರು ಬಾವಿಯಲ್ಲಿದ್ದಾರೆ. ಮಾನ್ಯ ಬೈರೇಗೌಡರು ಮೊದಲಿರಲಿಲ್ಲ. ಈಗ ಬಾವಿಗೆ ಬಂದಿದ್ದೀರಿ. ನೀವು ಏತಕ್ಕೆ ಬರುವುದಕ್ಕೆ ಹೋದಿರಿ?

ಶ್ರೀ ಎಂ. ಮಹದೇವ್ ; ಸಾರ್, ಅವರು ಬಾವಿಯಲ್ಲಿ ಬಿದ್ದು ಗ್ರಾನೈಟ್ ಹುಡುಕುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಆದ್ದರಿಂದ ದಯವಿಟ್ಟು ಸದನದಲ್ಲಿ ಉಳಿದಿರತಕ್ಕ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಮಾನ್ಯ ಅಧ್ಯಕ್ಷರಿಗೆ ಅನುವು ಮಾಡಿಕೊಡೋಣ. ಮಾನ್ಯ ಸಭಾಧ್ಯಕ್ಷರೆ, ನಾವು ಕಾಲವನ್ನು ಕೇಳಿದ್ದೇವೆ. ಅದು ಇವತ್ತು ಸಾಧ್ಯವಾಗಲಾರದು. ಏಕೆಂದರೆ ನಾವು ಕೂಡ ಚರ್ಚೆ ಮಾಡಿ ಅದರ ಬಗ್ಗೆ ಏನು ಎಂದು ಹೇಳುತ್ತೇವೆ. ಮುಂದೆ ಕಾರ್ಯಕಲಾಪಗಳು ಮತ್ತೆ ಯಾವಾಗ ಬರುತ್ತದೆ ಅದರ ನೆಕ್ಸ್ಟ್ ಡೇನ ಯಾವಾಗ ನಾವು ಕುಳಿತುಕೊಳ್ಳುತ್ತೇವೆ. ಆಗ ವಿಚಾರವನ್ನು ನಾವು ಹೇಳುತ್ತೇವೆ. ದಯಮಾಡಿ ತಮ್ಮ ಮುಖಾಂತರ ಮತ್ತೊಮ್ಮೆ ವಿನಂತಿ ಮಾಡುತ್ತಿದ್ದೇನೆ.

ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತಾ ಇದ್ದೇವೆ. ನೀವು ಅಲ್ಲಿ ಮಾತನಾಡಿದರೆ ನಾನು ಯಾರಿಗೆ ಹೇಳಬೇಕು? ಕರಾರುವಾಕ್ಕಾಗಿ, ಕಾನೂನು ಪ್ರಕಾರ ಹೇಳಬೇಕಾದರೆ ನೀವು ಅಲ್ಲಿ ಕುಳಿತುಕೊಳ್ಳಬೇಕಾಗಿತ್ತು. ನಾನು ಇಲ್ಲಿ ಕುಳಿತುಕೊಳ್ಳಿ ಎಂದು ಹೇಳಲಿಲ್ಲ. ತಮ್ಮ ತಮ್ಮ ಸ್ಥಾನಕ್ಕೆ ಹೋಗಿ ಎಂದು ಹೇಳಿದೆ. ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ ಕಾರ್ಯಕಲಾಪ ನಡೆಯುವುದಕ್ಕೆ ಸಹಕಾರ ಮಾಡಕೊಡಬೇಕು ಎಂದು ನಾನು ವಿನಂತಿ ಮಾಡುತ್ತಿದ್ದೇನೆ. ಸರ್ಕಾರ ಇದರ ಬಗ್ಗೆ ವಿಚಾರ ಮಾಡುವುದಕ್ಕೆ ಮುಕ್ತ ಮನಸ್ಸಿನಿಂದ ಇದೆ.

ಅಧ್ಯಕ್ಷರು ; ಸರ್ಕಾರದ ನಿಲುವಳಿ, ಮುಕ್ತ ತೆರೆದ ಮನಸ್ಸಿದೆ. ನೀವು ಹೇಳಿರತಕ್ಕ ವಿಚಾರಗಳಿಗೆ ಕಾಲಾವಕಾಶ ಮಾತ್ರ ಕೇಳಿದ್ದಾರೆ. ಈ ಬರವಸೆಯ ಆಧಾರತ ಮೇಲೆ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಿ ಸಭೆ ನಡೆಯುವುದಕ್ಕೆ ಸಹಕಾರಿಗಳಾಗಬೇಕು ಎಂದು ಹೇಳಿ ಪ್ರಾರ್ಥನೆ ಮಾಡುತ್ತೇನೆ.

(ಧರಣಿ ಕುಳಿತಿದ್ದ ಸದಸ್ಯರು ಏಳಲಿಲ್ಲ)

ಶ್ರೀ ಎಸ್. ಬಂಗಾರಪ್ಪ : ಮೌನಂ ಸಮ್ಮತಿ ಲಕ್ಷಣಂ.....

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ಗ್ರಾನೈಟ್‌ನಷ್ಟು ಗಟ್ಟಿಯಾಗಿ ಮನಸ್ಸು ಮಾಡಿಬಿಟ್ಟರೆ ಹೇಗೆ? (ನಗು) ಪಾರ್ಲಿಮೆಂಟರಿ ಸಂಪ್ರದಾಯದಲ್ಲಿ give and take ಇರುತ್ತದೆ, ಇರಬೇಕು. ಹಿಂದೆಯೂ ಇತ್ತು,ಇವತ್ತೂ ಇದೆ, ನಾಳೆಯೂ ಇರುತ್ತದೆ. ಅದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಸಾಕಾದಷ್ಟು ಹಿಂಟ್ಸ್ ಕೊಟ್ಟಿದ್ದಾರೆ ಮುಕ್ತ ಮನಸ್ಸಿದೆ ಎಂದು ಹೇಳಿದ್ದಾರೆ. ಪ್ರಜಾಪ್ರಭುತ್ವದ ಒಟ್ಟು ಅರ್ಥ ಚರ್ಚೆ. ಆ ಆಧಾರದ ಮೇಲೆ ತಾವು ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅನುವು ಮಾಡಿಕೊಡಬೇಕು.

(ಧರಣಿ ಕುಳಿತಿದ್ದ ಸದಸ್ಯರು ಏಳಲಿಲ್ಲ)

ಅಧ್ಯಕ್ಷರು ; ಇಲ್ಲದೇಹೋದರೆ, ನನ್ನ ಪ್ರಾರ್ಥನೆ ಎಲ್ಲವೂ ಕೂಡ "ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ" ಆಗುತ್ತದೆ.

(ಒಬ್ಬ ಮಾನ್ಯ ಸದಸ್ಯರು ಗ್ರಾನೈಟ್ ಕಲ್ಲು ಎಂದರು)

ಅಧ್ಯಕ್ಷರು : ಗ್ರಾನೈಟ್ ಕಲ್ಲಾ?

ಶ್ರೀ ಬಿ.ಎಂ. ಇದಿನಬ್ಬ : ಒಳ್ಳೆಯ ಪ್ರಾರ್ಥನೆಯಿಂದ, ಒಳ್ಳೆಯ ವಿಚಾರಗಳಿಂದ ಕಲ್ಲೂ ಕೂಡ ಕರಗಿದ್ದನ್ನು ಕೇಳಿದ್ದೇವೆ.

ಅಧ್ಯಕ್ಷರು : ನನಗೆ ತೊಂದರೆ ಬಂದಿರತಕ್ಕದ್ದು ಏನು ಎಂದರೆ.....

ಮಾನ್ಯ ವಿರೋಧ ಪಕ್ಷದ ನಾಯಕರಿಂದ ನಾನು ಪ್ರತಿಕ್ರಿಯೆಯನ್ನು ನಿರೀಕ್ಷಿಸಬಹುದೇ? ಅವರು ತಮ್ಮ ಸ್ಥಾನಕ್ಕೆ ಬಂದು ನಾನು ಮಾಡಿರತಕ್ಕ ಪ್ರಾರ್ಥನೆಗೆ ಪ್ರತಿಕ್ರಿಯಿಸಿದರೆ....

(ಮಾನ್ಯ ವಿರೋಧ ಪಕ್ಷದ ನಾಯಕರು ಅವರು ಸ್ಥಾನಕ್ಕೆ ದಯಮಾಡಿಸಲಿಲ್ಲ)

ಅಧ್ಯಕ್ಷರು : ಈಗ ಈ ಸದನವು ಮುಂದುವರೆದು ಮತ್ತೆ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶ ಗೊಳ್ಳುವುದು.

(ಸದನವು 12 ಗಂಟೆ 16 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 2ನೇ ಸೆಪ್ಟೆಂಬರ್ 1991ರ ಸೋಮವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).